ತ್ತದೆ. ಅದೇ ಮೊಟ್ಟೆ ಒಳಗಿನಿಂದ ಒಡೆದರೆ ಜೀವ ಆರಂಭವಾಗು ತ್ತದೆ.) ಬೆಳವಣಿಗೆ ಯಾವಾಗಲೂ ಒಳಗಿನಿಂದ. ಜಡವಸ್ತುವಿನಲ್ಲಿ ಬದಲಾವಣೆ ಸಾಧ್ಯ, ಆದರೆ ಬೆಳವಣಿಗೆ ಸಾಧ್ಯವಿಲ್ಲ.

ಶ್ರೀರಾಮಕೃಷ್ಣರು ಇನ್ನೊಂದು ಉದಾಹರಣೆಯನ್ನು ಕೊಡು ತ್ತಾರೆ. ಅವರು ಕೊಡುವ ಉದಾಹರಣೆಗಳಲ್ಲಿ ಅನೇಕ ಒಳ ಅರ್ಥಗಳಿರುತ್ತವೆ. ಅದನ್ನು ಅರಿತುಕೊಳ್ಳುವ ವಿಚಾರಬುದ್ಧಿ ನಮ ಗಿರಬೇಕು. ಶ್ರೀರಾಮಕೃಷ್ಣರು ಮೇಲೆ ಮಲಯ ಮಾರುತದ ಬಗ್ಗೆ ಹೇಳುತ್ತಾರೆ. ಇಲ್ಲಿ ಮಲಯ ಮಾರುತವೆಂದರೆ ಆಧ್ಯಾತ್ಮಿಕ ಗಾಳಿ. ಹತ್ತಿಯು ತುಂಬ ಹಗುರವೂ ಸಡಿಲವೂ ಆದ ಜೀವನ ವನ್ನು ಸೂಚಿಸುತ್ತದೆ. ಅಂಥವರು ಯಾವುದನ್ನೂ ಗಂಭೀರವಾಗಿ ಸ್ವೀಕರಿಸುವುದಿಲ್ಲ. ಆದ್ದರಿಂದ ಅವರಲ್ಲಿ ಬದಲಾವಣೆ ಸಾಧ್ಯ ವಿಲ್ಲ. ಸಂಸ್ಕೃತದ ಒಂದು ಸುಭಾಷಿತ ಶ್ಲೋಕ ಹಾಸ್ಯಭರಿತ ವಾಗಿದೆ:

**ತೃಣಾದಪಿ ಲಘುಸ್ತೂಲಃ ತೂಲಾದಪಿ ಚ ಯಾಚಕಃ ।**
**ವಾಯುನಾ ಕಿಂ ನ ನೀತೋಽಸೌ ಮಯ್ಯಾಽಯಂ ಪ್ರಾರ್ಥಯೇದಿತಿ ॥**

''ಹುಲ್ಲಿಗಿಂತಲೂ ಹಗುರವಾದುದು ಹತ್ತಿ. ಹತ್ತಿಗಿಂತಲೂ ಹಗುರವಾದವನು ಯಾಚಕ (ಬೇಡುವವನು). ಹಾಗಾದರೆ ಗಾಳಿಯು ಏಕೆ ಅವನನ್ನು ಎತ್ತಿಕೊಂಡು ಹೋಗುವುದಿಲ್ಲ? ಏಕೆಂ ದರೆ, ತನ್ನಿಂದಲೂ ಏನಾದರೂ ಬೇಡಿಯಾನು ಎಂಬ ಭಯ ದಿಂದ.'' ಅನೇಕರಲ್ಲಿ ಬೇಡುವ ಪ್ರವೃತ್ತಿ ಇರುತ್ತದೆ, ಅದಕ್ಕೆ ಭಿಕ್ಷುಕರೇ ಆಗಿರಬೇಕೆಂದೇನಿಲ್ಲ. ಕೆಲವರು ಪ್ರಶಂಸೆಯನ್ನು ಬೇಡುತ್ತಾರೆ, ಮತ್ತೆ ಕೆಲವರು ಮುಗುಳ್ನಗೆಯನ್ನು ಬೇಡುತ್ತಾರೆ. ಒಟ್ಟಾರೆ ಇತರರು ತಮ್ಮನ್ನು ಗುರುತಿಸಬೇಕೆಂದು ಬಯಸುತ್ತಾರೆ. ಹೀಗೆ ಅನೇಕ ಬಗೆಯ ಯಾಚಕರಿರುತ್ತಾರೆ.

ಅವರು ಕೊಡುವ ಇನ್ನೊಂದು ಉದಾಹರಣೆ ಅಶ್ವತ್ಥ. ಇದು ಅಹಂಕಾರವನ್ನು ಪ್ರತಿನಿಧಿಸುತ್ತದೆ. ಶ್ರೀರಾಮಕೃಷ್ಣರು ಅಹಂ ಕಾರವನ್ನು ಅಶ್ವತ್ಥಕ್ಕೆ ಹೋಲಿಸುತ್ತಾರೆ. ಅಶ್ವತ್ಥವು ಎಷ್ಟೇ ಚಿವುಟಿ ಹಾಕಿದರೂ ಮತ್ತೆ ಚಿಗುರುವಂತೆ, ಅಹಂಕಾರವೂ ಎಷ್ಟೇ ಹೋಗ ಲಾಡಿಸಿದರೂ ಮತ್ತೆ ಚಿಗುರುತ್ತದೆ. ಈ ಉದಾಹರಣೆ ಏನನ್ನು ಸೂಚಿಸುತ್ತದೆ ಎಂದರೆ ಯಾರಲ್ಲಿ ಬಲವಾದ ಅಹಂಕಾರವಿರು ತ್ತದೋ ಅವರು ಬದಲಾಗುವುದಿಲ್ಲ. ಚೈತನ್ಯ ಮಹಾಪ್ರಭು ಹೇಳುತ್ತಾರೆ:

**ಅಮಾನಿನಾ ಮಾನದೇನ ಕೀರ್ತನೀಯಃ ಸದಾ ಹರಿಃ ।**

''ತಾನು ಮಾನ್ಯತೆಯನ್ನು ಬಯಸದೆ, ಇತರರಿಗೆ ಮಾನ್ಯತೆ ಯನ್ನು ನೀಡುತ್ತ ಯಾವಾಗಲೂ ಹರಿಯನ್ನು ಸ್ತುತಿಸಬೇಕು.'' ಅತ್ಯಂತ ಸಾಮಾನ್ಯನಾಗಿರುವುದೇ ಒಂದು ಅಸಾಮಾನ್ಯ ವಿಷಯ.

ಶ್ರೀರಾಮಕೃಷ್ಣರು ಕೊಡುವ ಇನ್ನೊಂದು ಉದಾಹರಣೆ ಅಮಟೆ. ಇದು ನಿಸ್ಸಾರವನ್ನು ಸೂಚಿಸುತ್ತದೆ. ನಿಸ್ಸಾರ ವ್ಯಕ್ತಿ, ಒಳಗೇನೂ ಸತ್ತ್ವವೇ ಇಲ್ಲದ ವ್ಯಕ್ತಿ ಬದಲಾಗುವುದೆಂತು! ನಿಃಸತ್ತ್ವ ಬೀಜವು ಬೆಳೆದು ಮರವಾಗುವುದೆ! ಸತ್ತ್ವಪೂರ್ಣವಾದ ಬೀಜವು ಸುತ್ತಮುತ್ತಲಿನ ಎಲ್ಲ ಸಾರವನ್ನು ಹೀರಿಕೊಂಡು ಬೆಳೆದು ಹೆಮ್ಮರ ವಾಗುತ್ತದೆ.

## ಸಮಾಜ ಸುಧಾರಣೆ

ಪರಮಹಂಸರು ಸುರೇಂದ್ರನ ಮನೆಗೆ ಬಂದು ಬೈಠಕ್ ಖಾನೆಯಲ್ಲಿ ಕುಳಿತುಕೊಂಡಿದ್ದಾರೆ. ಅನೇಕ ಮಂದಿ ಭಕ್ತರು ಸುತ್ತಲೂ ಕುಳಿತುಕೊಂಡಿದ್ದಾರೆ. ಜಡ್ಜಿಯಾಗಿರುವ ಸುರೇಂದ್ರನ ಅಣ್ಣನೂ ಬಂದು ಕುಳಿತಿದ್ದಾನೆ.

**ಸುರೇಂದ್ರನ ಅಣ್ಣ:** ''ಬ್ರಹ್ಮ ಸಮಾಜ ಪ್ರಚಾರ ಮಾಡು ತ್ತದೆ, ಹೆಂಗಸರಿಗೆ ಸ್ವಾಧೀನತೆ ಕೊಡಬೇಕು, ಜಾತಿಭೇದ ನಿರ್ಮೂಲ ಮಾಡಬೇಕು ಎಂಬುದಾಗಿ. ಇವುಗಳ ಸಂಬಂಧ ವಾಗಿ ನಿಮ್ಮ ಅಭಿಪ್ರಾಯವೇನು?''

**ಶ್ರೀರಾಮಕೃಷ್ಣರು:** ''ಜನರಿಗೆ ಭಗವಂತನಲ್ಲಿ ಹೊಸದಾಗಿ ಅನುರಾಗ ಉಂಟಾಗಿದ್ದರೆ ಹಾಗೆನಿಸುತ್ತದೆ. ಬಿರುಗಾಳಿ ಬಂತು ಎಂದರೆ ಧೂಳು ಏಳುತ್ತದೆ. ಆಗ ಅಮಟೆಕಾಯಿಯ ಮರ ಯಾವುದು, ಹುಣಸೆ ಮರ ಯಾವುದು, ಮಾವಿನ ಮರ ಯಾವುದು ಎಂಬುದನ್ನು ಪ್ರತ್ಯೇಕಿಸಲಾಗುವುದಿಲ್ಲ. ಆದರೆ ಬಿರು ಗಾಳಿ ನಿಂತು ಹೋದ ನಂತರ ಎಲ್ಲವೂ ಸ್ಪಷ್ಟವಾಗಿ ತೋರಿ ಬರು ತ್ತವೆ. ನವಾನುರಾಗದ ಬಿರುಗಾಳಿ ನಿಂತು ಹೋದ ನಂತರ ಕ್ರಮೇಣ ಅರ್ಥವಾಗುತ್ತದೆ, ನಿಜವಾಗಿ ಭಗವಂತನೇ ಶ್ರೇಯ ಸ್ಕರ ನಿತ್ಯವಸ್ತು, ಉಳಿದುದೆಲ್ಲ ಅವಸ್ತು ಎಂಬುದಾಗಿ. ಸಾಧು ಸಂಗ, ತಪಸ್ಸು ಇವನ್ನು ಮಾಡದಿದ್ದರೆ ಇದನ್ನು ಗ್ರಹಿಸಲಾಗು ವುದಿಲ್ಲ. ಮೃದಂಗದ ಶಬ್ದ ಕೇವಲ ಬಾಯಿಂದ ಹೊರಡಿಸಿದರೆ ಏನು ಪ್ರಯೋಜನ? ಅದನ್ನು ಮೃದಂಗದ ಮೂಲಕ ಹೊರಡಿ ಸುವುದು ಬಹಳ ಕಠಿಣ. ಕೇವಲ ಲೆಕ್ಚರ್‌ನಿಂದಲೇ ಏನು ಪ್ರಯೋಜನ? ತಪಸ್ಸು ಮಾಡಬೇಕು, ಆಗ ಗ್ರಹಿಸಲು ಸಾಧ್ಯ ವಾಗುತ್ತದೆ.'' *(ಅಲ್ಲೇ, ಪು. ೧೧೨-೧೩).*

ಅನೇಕರಲ್ಲಿ ಆಧ್ಯಾತ್ಮಿಕ ಜಾಗೃತಿಯು ಸಮಾಜಸೇವೆಯ ರೂಪದಲ್ಲಿ ವ್ಯಕ್ತವಾಗುತ್ತದೆ. ಇಂದ್ರಿಯ ಸುಖವನ್ನು ಮೀರಿ ಬೆಳೆದಾಗ, ಸ್ವಾರ್ಥದ ಪರಿಧಿಯಿಂದ ಹೊರಬಂದಾಗ ಸಮಾಜದ ಅಂಕುಡೊಂಕುಗಳು ಕಾಣಲು ಶುರುವಾಗುತ್ತದೆ. ಆಗ ಈ ಸಾಮಾಜಿಕ ದೋಷಗಳನ್ನು ಸರಿಪಡಿಸಬೇಕು ಎಂಬ ಉತ್ಸಾಹ ಹೊರಹೊಮ್ಮುತ್ತದೆ. ಇನ್ನು ಕೆಲವರಲ್ಲಿ ಆಧ್ಯಾತ್ಮಿಕ ಜಾಗೃತಿ ಯುಂಟಾದಾಗ ತಮ್ಮಲ್ಲಿರುವ ದೋಷಗಳೇ ಎದ್ದು ಕಾಣಿಸ ತೊಡಗುತ್ತವೆ. ಈ ಎರಡೂ ಆದರ್ಶಗಳೂ ಒಂದುಗೂಡಿದಾಗ (harmonised) ಸ್ವಾಮಿ ವಿವೇಕಾನಂದರ, **'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'** ಎಂಬ ಮಂತ್ರವು ಸಾಫಲ್ಯವನ್ನು ಪಡೆ ಯುತ್ತದೆ.

ಸಮಾಜ ಸುಧಾರಣೆಯ ಬಗ್ಗೆ ಸ್ವಾಮಿ ವಿವೇಕಾನಂದರ ಅಭಿಪ್ರಾಯಗಳನ್ನು ಸ್ಮರಿಸಿಕೊಳ್ಳಬಹುದು. ಅವರು ಆಮೂಲಾಗ್ರ ಸುಧಾರಣೆಯನ್ನು (root and branch reformation) ಬಯಸಿದರು. ಅಲ್ಲಿ ಇರುವ, ಕೆಲವು ವರ್ಗಕ್ಕೆ ಮಾತ್ರ ಸೀಮಿತವಾದ ಸುಧಾರಣೆಗಳಿಗೆ ಅವರು ಪ್ರಾಮುಖ್ಯ ನೀಡಲಿಲ್ಲ. ಇಡೀ ದೇಹವೇ ಆರೋಗ್ಯವಂತವಾದರೆ, ಬೇರೆ ಬೇರೆ ಅಂಗಗಳ ದೋಷವೂ ಸುಧಾರಣೆಯಾಗುತ್ತದೆ. ರಸ್ತೆಯ ಹೊಂಡ ಮುಚ್ಚುವುದಲ್ಲ, ಬಲವಾದ ತಳಹದಿಯೊಂದಿಗೆ ರಸ್ತೆಯನ್ನು ನಿರ್ಮಿಸುವುದು.

ಸ್ವಾಮಿ ವಿವೇಕಾನಂದರು ಹೇಳುತ್ತಾರೆ: ''ನಮ್ಮಲ್ಲಿ ದೋಷಗಳಿವೆ ಎಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಎಲ್ಲರೂ ದೋಷವನ್ನೇ ತೋರಿಸಬಹುದು. ಆದರೆ ಯಾರು ಅದರಿಂದ ಪಾರಾಗಲು ಮಾರ್ಗವನ್ನು ತೋರಿಸಬಲ್ಲರೋ ಅವರೇ ಮಾನವ ಬಂಧುಗಳು. ಮುಳುಗುತ್ತಿರುವ ಹುಡುಗ ಹಾಗೂ ತತ್ತ್ವಜ್ಞಾನಿಯಂತೆ – ಹುಡುಗ ನೀರಿನಲ್ಲಿ ಮುಳುಗುತ್ತಿದ್ದಾಗ ತತ್ತ್ವಜ್ಞಾನಿ ಅವನಿಗೆ ಬೋಧನೆ ಮಾಡುತ್ತಿದ್ದ. ಹುಡುಗನು 'ನನ್ನನ್ನು ಮೊದಲು ನೀರಿನಿಂದ ಮೇಲೆತ್ತಿ' ಎಂದು ಕಿರುಚಿಕೊಂಡನು.''

''ನೀವು ಸಮಸ್ಯೆಯ ಮೂಲಕ್ಕೆ ಹೋಗಬೇಕು. ಇದನ್ನೇ ನಾನು ಆಮೂಲಾಗ್ರ ಸುಧಾರಣೆ ಎನ್ನುವುದು. ಮೊದಲು ಅಲ್ಲಿ ಬೆಂಕಿ ಇಡಿ, ಹೊತ್ತಿಕೊಂಡು ಉರಿಯಲಿ. ಆಗ ಭಾರತ ರಾಷ್ಟ್ರ ನಿರ್ಮಾಣವಾಗುವುದು. ಸಮಸ್ಯೆ ಬಹಳ ಜಟಿಲವಾಗುವುದರಿಂದ, ವಿಶಾಲವಾಗಿರುವುದರಿಂದ ಸುಧಾರಣೆ ಅಷ್ಟು ಸುಲಭವಲ್ಲ, ಅವಸರಪಡಬೇಕಾಗಿಲ್ಲ.'' *(ಕೃತಿಶ್ರೇಣಿ, ಸಂ. ೩., ಪು.೯೭)*

ಒಬ್ಬ ಯಹೂದಿ ಸಂತನು ಹೇಳಿದ ಮಾತು: ''ಯುವಕನಾಗಿದ್ದಾಗ ನಾನು ಕ್ರಾಂತಿಕಾರಿಯಾಗಿದ್ದೆ, ಇಡೀ ಜಗತ್ತನ್ನೇ ಉದ್ಧಾರ ಮಾಡಬೇಕು ಎಂದೆನಿಸುತ್ತಿತ್ತು. ವಯಸ್ಸಾದಂತೆ, ಇದು ಅಸಾಧ್ಯ, ಸುತ್ತಲಿನ ಸಮಾಜದಲ್ಲಿ ಬದಲಾವಣೆಯನ್ನು ಉಂಟು ಮಾಡಿದರೆ ಸಾಕು ಎಂದೆನಿಸತೊಡಗಿತು. ಇನ್ನೂ ವಯಸ್ಸಾದ ಮೇಲೆ ಕುಟುಂಬವನ್ನು ಬದಲಾಯಿಸಿದರೆ ಸಾಕಪ್ಪ ಎಂದೆನಿಸಿತು. ಈಗ ನಾನು ಮುದುಕನಾಗಿದ್ದೇನೆ. ನನ್ನೊಬ್ಬನನ್ನು ಉದ್ಧಾರ ಮಾಡಿಕೊಂಡರೆ ಬೇಕಾದಷ್ಟು ಎಂದೆನಿಸುತ್ತದೆ. ಇದನ್ನು ನಾನು ಮೊದಲೇ ಆಲೋಚಿಸಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು!''

### ಅಲೌಕಿಕ ಶಕ್ತಿ

ಸುರೇಂದ್ರನ ಅಣ್ಣನ ''ಥಿಯಾಸಫಿ ಸಂಬಂಧವಾಗಿ ನಿಮ್ಮ ಅಭಿಪ್ರಾಯವೇನು?'' ಎಂಬ ಪ್ರಶ್ನೆಗೆ ಶ್ರೀರಾಮಕೃಷ್ಣರ ಉತ್ತರ: ''ಅದು ಅಲೌಕಿಕ ಶಕ್ತಿಯನ್ನು ದೊರಕಿಸಿಕೊಡುತ್ತದೆ ಅಂತ ಕೇಳಿದ್ದೇನೆ. ಒಂದು ಮನೆಯಲ್ಲಿ ಒಬ್ಬ ಪಿಶಾಚಸಿದ್ಧ ಇದ್ದ. ಆತನಿಗೆ ಪಿಶಾಚಿ ಏನೇನೋ ವಸ್ತುಗಳನ್ನು ತಂದುಕೊಡುತ್ತಿತ್ತು. ಅಲೌಕಿಕ ಶಕ್ತಿ ನನಗೇಕೆ? ಅದರಿಂದ ಭಗವಂತನ ಸಾಕ್ಷಾತ್ಕಾರ ದೊರಕುವುದೆ? ಭಗವಂತನ ಸಾಕ್ಷಾತ್ಕಾರ ದೊರೆಯದೆ ಹೋಯಿತು ಎಂದರೆ, ಆಗ ಪ್ರತಿಯೊಂದೂ ಮಿಥ್ಯೆಯಾಗಿ ಬಿಡುತ್ತದೆ.''

*(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು. ೧೧೩)*

ಒಬ್ಬ ಪವಾಡಪುರುಷನಾದ ಸಾಧುವು ರಾಜನ ಬಳಿಗೆ ಬಂದು, ''ನಾನು ನಿನಗೆ ಗುರುವಾಗುತ್ತೇನೆ'' ಎಂದು ಹೆಮ್ಮೆಯಿಂದ ಹೇಳಿದನು. ''ಅದಕ್ಕೆ ನಿಮ್ಮ ಅರ್ಹತೆಗಳೇನು?'' ಎಂದು ರಾಜನು ಗೌರವದಿಂದ ಪ್ರಶ್ನಿಸಿದನು. ಸಾಧುವು, ''ನಾನು ನೆಲದೊಳಗೆ ಮಣ್ಣುಮುಚ್ಚಿಕೊಂಡು ಬಹಳ ಕಾಲ ಇರಬಲ್ಲೆ. ನಾನು ಆಕಾಶದಲ್ಲಿ ಹಾರಬಲ್ಲೆ. ನಾನು ನೀರಿನೊಳಗೆ ಬಹಳಕಾಲ ಇರಬಲ್ಲೆ'' ಎಂದು ತನ್ನ ಅಲೌಕಿಕ ಶಕ್ತಿಯನ್ನು ಬಣ್ಣಿಸಿದನು. ರಾಜನು ಆತನನ್ನು ಅರಮನೆಯ ತೋಟದೊಳಗೆ ಕರೆದುಕೊಂಡು ಹೋಗಿ ಹೇಳಿದನು: ''ನೋಡಿ ಸಾಧುಗಳೇ, ಇಲ್ಲಿ ಭೂಮಿಯನ್ನು ಅಗೆದರೆ ಅನೇಕ ಬಗೆಯ ಹುಳುಗಳು ಕಾಣಿಸುತ್ತವೆ. ನೀವೂ ಈ ಹುಳುಗಳಂತೆ ಭೂಮಿಯ ಒಳಗೆ ಇರಬಲ್ಲಿರಿ, ಮೇಲೆ ನೋಡಿ, ಹಕ್ಕಿಗಳು ಹಾರಾಡುತ್ತಿವೆ. ಅವುಗಳಂತೆ ನೀವೂ ಹಾರಬಲ್ಲಿರಿ. ಇಲ್ಲಿ ನೋಡಿ, ಈ ಕೊಳದ ನೀರಿನಲ್ಲಿ ಎಷ್ಟೊಂದು ಮೀನುಗಳು ಓಡಾಡುತ್ತಿವೆ. ನಿಮಗೂ ಈ ಮೀನುಗಳಿಗೂ ಏನು ವ್ಯತ್ಯಾಸವಾದಂತಾಯಿತು?'' ಸಾಧುವಿನ ಕಣ್ಣು ತೆರೆಯಿತು. ಅವನಲ್ಲಿದ್ದ ಸತ್ ಸಂಸ್ಕಾರಗಳು ಜಾಗೃತವಾದವು. ಅವನು ''ನೀವೇ ನನ್ನ ಗುರುಗಳು'' ಎಂದು ರಾಜನಿಗೆ ಶರಣಾದನು.

ತಿಚ್ ನ್ಹಾಟ್ ಹನ್ಹ್ ಎಂಬ ಜೆನ್ ಗುರು ಹೇಳುತ್ತಾರೆ: ''ನಿಜವಾದ ಪವಾಡ ಯಾವುದೆಂದರೆ ಗಾಳಿಯಲ್ಲಿ ನಡೆಯುವುದೂ ಅಲ್ಲ, ನೀರಿನ ಮೇಲೆ ನಡೆಯುವುದೂ ಅಲ್ಲ, ಆದರೆ ಭೂಮಿಯ ಮೇಲೆ ನಡೆಯುವುದು.''( The real miracle is not to walk in thin air, not even on the water, but to walk on the earth itself.) ಇದರ ಅರ್ಥ, ನಾವು ಯಾವಾಗಲೂ ವರ್ತಮಾನ ಕ್ಷಣದಲ್ಲಿ ಇರಬೇಕು ಎಂದು. ನಿಜವಾಗಿಯೂ ಇದೇ ದೊಡ್ಡ ಪವಾಡ.

*(ಮುಂದುವರಿಯುವುದು)*

ಜಪ ಮಾಡುವುದಕ್ಕೆ, ಭಗವಂತನ ನಾಮೋಚ್ಚಾರಣೆ ಮಾಡುವುದಕ್ಕೆ ಯಾವಾಗ ಇಚ್ಛೆಯಾದರೆ ಆಗ ಮಾಡಬಹುದು. ಅದಕ್ಕೆ ಕಾಲ ಅಕಾಲ ಇಲ್ಲ. ಸ್ಥಾನ ಅಸ್ಥಾನ ಇಲ್ಲ. ಆದರೆ ಭಕ್ತಿಯಿಂದ ಮಾಡಬೇಕು, ಅಷ್ಟೆ. ಆಗಲೆ ಆನಂದಾನುಭವವಾಗುವುದು, ಪ್ರಾಣದಲ್ಲಿ ಶಾಂತಿ ನೆಲೆಸುವುದು. ಒಳಗಣಿಂದ ಜಪ ಮಾಡಬೇಕು ಎಂಬ ಆಸೆ ಯಾವಾಗ ಉಂಟಾಗುತ್ತದೆಯೋ ಹತ್ತು ನಿಮಿಷವಾಗಲಿ, ಅರ್ಧ ಗಂಟೆಯಾಗಲಿ, ಒಂದು ಗಂಟೆಯಾಗಲಿ, ಹೆಚ್ಚೇ ಆಗಲಿ, ಆವಾಗಲೇ ಜಪ ಮಾಡಬಹುದು.

*— ಸ್ವಾಮಿ ಶಿವಾನಂದ*



# ಹಿಮಾಲಯದ ಗುಹೆಯಲ್ಲಿ ಎರಡು ರಾತ್ರಿಗಳು

**ಸ್ವರ್ಣಗೌರಿ**

ಹಿಮಾಲಯವು ಸಾಧು, ಸಂತರ ನಾಡು. ಬಹಳ ಪ್ರಾಚೀನ ಕಾಲದಿಂದ ಅನೇಕ ಮಂದಿ ತಪಸ್ವಿಗಳ ಧ್ಯಾನ, ಸಾಧನೆಗಳಿಂದ ಪುನೀತವಾದ ಈ ಪುಣ್ಯಭೂಮಿಯಲ್ಲಿ ಸಾಧಕರೊಬ್ಬರ ಜೊತೆಗೆ ಕಳೆದ ಅನುಭವವನ್ನು ಇಲ್ಲಿ ನಿರೂಪಿಸಲಾಗಿದೆ. ಲೇಖಕಿ, ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ಈ ಪತ್ರಿಕೆಯಲ್ಲಿ ಅನೇಕ ಲೇಖನಗಳನ್ನು ಬರೆದಿರುವ ಅವರು ಕೆಲವು ಗ್ರಂಥಗಳನ್ನೂ ರಚಿಸಿದ್ದಾರೆ.

ಒಂದು ದಿನ ಇದ್ದಕ್ಕಿದ್ದಂತೆ ನನ್ನ ಆಧ್ಯಾತ್ಮಿಕ ಸ್ನೇಹಿತೆಯೊಬ್ಬರಿಂದ ದೂರವಾಣಿಯ ಕರೆ ಬಂದಿತು. 'ನಾನು ಉತ್ತರ ಕಾಶಿಗೆ ಹೋಗುತ್ತಿರುವೆ, ನೀನು ಬರುವಿಯೇನು?' ಎಂದು. ಬಹುಶಃ ಶ್ರೀಮಾತೆ ಶಾರದಾದೇವಿಯವರೇ ಆಕೆಯ ಹೃದಯದಲ್ಲಿ ಕುಳಿತು ಪ್ರೇರೇಪಿಸಿರಬೇಕು ಎಂದೆನಿಸಿತು. ಆ ಆತ್ಮೀಯ ಕರೆಗೆ ನನ್ನ ಮನವು ಆನಂದದಿಂದ ಮಾರ್ದನಿಸಿತು. ಮತ್ತೊಮ್ಮೆ ಹಿಮಾಲಯ ವಾಸದ ಸೌಭಾಗ್ಯ ದೊರಕುತ್ತಿದೆ! ಎರಡು ವರ್ಷಗಳಿಂದ ಕರೋನಾದ ಕಾರಣ ಮನೆಯಲ್ಲೇ ಏಕಾಂತವಾಸದ ಸುಖ ಅನುಭವಿಸುತ್ತಿದ್ದವಳಿಗೆ ಆ ಹಿಮಶಿಖರಗಳು ಕೈ ಬೀಸಿ ಕರೆಯುತ್ತಿವೆ ಎಂಬ ಭಾವನೆ ಮೂಡಿ ಪುಳಕಿತಳಾದೆ. ಹಿಂದೆ ನಾಲ್ಕೈದು ಬಾರಿ ಹಿಮಾಲಯಕ್ಕೆ ಭೇಟಿ ನೀಡಿದ್ದ ನನಗೆ ಈಗಲೂ ಕಣ್ಮನಗಳು ಸೆಳೆಯುವ ಆ ಪ್ರಕೃತಿ ಸೌಂದರ್ಯ, ಆ ಪವಿತ್ರ ಆಧ್ಯಾತ್ಮಿಕ ತರಂಗಗಳು, ನೀರವತೆ, ಹಿಮಾಚ್ಛಾದಿತ ಪರ್ವತಗಳ ಸಾಲು, ಸದಾ ಗಾಢಸಮಾಧಿಯಲ್ಲಿರುವ ಆ ದೇವದಾರು ವೃಕ್ಷಗಳು ಎಲ್ಲವೂ ಮನದಲ್ಲಿ ಹಚ್ಚ ಹಸಿರಾಗಿವೆ. ಆ ದೇವಭೂಮಿಯ ನೆನಪೇ ಸಾಕು, ಮನ ಆನಂದದ ಸಂತೆಯಾಯಿತು.

ಆ ನನ್ನ ಸ್ನೇಹಿತೆ ವಾನಪ್ರಸ್ಥಕ್ಕೆಂದು ಆಯ್ದುಕೊಂಡ ಪ್ರಶಸ್ತ ಸ್ಥಳ ಉತ್ತರಕಾಶಿಯಿಂದ ಎರಡು ಕಿಲೋಮೀಟರ್ ದೂರದಲ್ಲಿರುವ ಲಕ್ಷ್ಮೇಶ್ವರ್. ಚಳಿಗಾಲದಲ್ಲಿ ಬೆಂಗಳೂರಿಗೆ ಬಂದು ಮತ್ತೆ ತಪೋಭೂಮಿಗೆ ಹಿಂದಿರುಗುವಾಗ ನನಗೂ ಆಹ್ವಾನ ನೀಡಿದ್ದರು. ಅಂತೂ ನಿಗದಿತ ದಿನ ನಾವು ನಾಲ್ವರು (ನನ್ನ ಸ್ನೇಹಿತೆ ಹಾಗೂ ಅವರ ಪತಿ, ನಾನು ಮತ್ತು ನನ್ನ ಮತ್ತೊಬ್ಬ ಗೆಳತಿ) ಆ ಪವಿತ್ರ ನೆಲದಲ್ಲಿ ಕಾಲೂರಿದೆವು. ಪ್ರಾತಃಕಾಲ ಐದೂವರೆಗೆ ಪಯಣ ಆರಂಭಿಸಿ ರಾತ್ರಿ ಹತ್ತು ಗಂಟೆಗೆ ನಮಗಾಗಿ ಕಾದಿರಿಸಿದ ತಂಗುದಾಣ ತಲುಪಿದಾಗ ಆಯಾಸವಾಗಿತ್ತು. ನಿದ್ರಾದೇವಿಯ ಆಲಿಂಗನದಲ್ಲಿ ಮೈಮರೆತವಳಿಗೆ ಮಾರನೆಯ ದಿನ ಬೆಳಕು ಹರಿಯುತ್ತಲೇ ಪ್ರಥಮವಾಗಿ ದೃಷ್ಟಿ ಗೋಚರವಾದದ್ದು ಹಿಮಾಚ್ಛಾದಿತ ಪರ್ವತಗಳ ಸಾಲು ಹಾಗೂ ನಿರ್ಮಲ ಜಾಹ್ನವಿಯ ಕಲರವ. ಆ ಮನೋಹರ ಪ್ರಕೃತಿಯಲ್ಲಿ ಒಂದು ಕ್ಷಣ 'ನಾನು' ಕರಗಿಹೋಯಿತು. ಎಂತಹ ಸುಂದರ ಅನುಭವ!

ನಮ್ಮಿಬ್ಬರಿಗೂ ಉಳಿದುಕೊಳ್ಳಲು ವ್ಯವಸ್ಥೆಯಾದ ಆಶ್ರಮವು ಉತ್ತರಕಾಶಿಯಿಂದ ನಾಲ್ಕು ಕಿಲೋಮೀಟರ್ ಹಾಗೂ ಲಕ್ಷ್ಮೇಶ್ವರದಿಂದ ಎರಡು ಕಿ.ಮಿ ದೂರದಲ್ಲಿತ್ತು. ಕರ್ನಾಟಕ ಮೂಲದ ಸಂತರಾದ 'ಸುಭದ್ರಾ ಮಾತಾಜಿ'ಯವರ ಸಮಾಧಿಯು ಈ ಆಶ್ರಮದಲ್ಲೇ ಇದೆ. 'ತಪೋವನೀ ಮಾ' ಎಂದೇ ವಿಖ್ಯಾತರಾದ ಅವರು ಚಳಿಗಾಲದಲ್ಲೂ ಕೆಳಗಿಳಿಯದೆ, ಒಂಬತ್ತು ವರ್ಷಗಳ ಕಾಲ ನಿರಂತರವಾಗಿ ಉತ್ತರಾಖಂಡದ ಗೋಮುಖ ಹಿಮಬಂಡೆಯಾಚೆಗಿರುವ ತಪೋವನದಲ್ಲಿ ಸಾಧನೆ ಮಾಡಿದ ಏಕೈಕ